**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.884/2014**

**ಪಿ.ಡಬ್ಲ್ಯೂ: 11**
**ಸಿ.ಡಬ್ಲ್ಯೂ: 07**

**ಹೆಸರು** : ಸುರೇಶ್ ಜಕ್ಕಣಾಚಾರ್

ತಂದೆಯ **ಹೆಸರು** : ಎಂ ಜಕ್ಕಣಾಚಾರ್
**ವಯಸ್ಸು** : 46 ವರ್ಷ
**ಉದ್ಯೋಗ** : ಕಾನೂನು ಸಲಹೆಗಾರರು, ಕಾವೇರಿ ಗ್ರಾಮೀಣ ಬ್ಯಾಂಕ್
**ವಾಸಸ್ಥಳ** : ಅಜ್ಜಂಪುರ

***ದಿನಾಂಕ: 03-09-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.***

**ನಾನು ಕಳೆದ *10* ವರ್ಷಗಳಿಂದ ನಾನು ಕಾವೇರಿ ಗ್ರಾಮೀಣ ಬ್ಯಾಂಕ್ ಬಾವಿಕೆರೆ ಶಾಖೆಗೆ ಕಾನೂನು ಸಲಹೆಗಾರರಾಗಿರುತ್ತೇನೆ.**

***2. ದಿ:07-06-2013 ರಂದು*** ಸಂಜೆ 7 ಗಂಟೆಗೆ ವಲಯ ವ್ಯವಸ್ಥಾಪಕರು ಚಿಕ್ಕಮಗಳೂರು ರವರು ನನಗೆ ದೂರವಾಣಿ ಕರೆ ಮಾಡಿ ಬಾವಿಕೆರೆ ಶಾಖೆಯ ವ್ಯವಸ್ಥಾಪಕರಾದ ರವಿನಾರಾಯಣ ನ್ಯಾಯಾಲಯದ ಮುಂದಿರುವ ಆರೋಪಿಯು ಶಾಖೆಯಲ್ಲಿ ಹಣ ದುರುಪಯೋಗ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಅದಕ್ಕೆ ಸಂಬಂದಿಸಿದಂತೆ ತರೀಕೆರೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುವ ಬಗ್ಗೆ ತಿಳಿಸಿರುತ್ತಾರೆ. ನಾನು ಬ್ಯಾಂಕಿಗೆ ಕಾನೂನು ಸಲಹೆಗಾರನಾಗಿದ್ದರಿಂದ ದಿ:***08-06-2013*** ರಂದು ಬೆಳಿಗ್ಗೆ ಶಾಖೆಗೆ ಹೋಗಿ ಹಿರಿಯ ವ್ಯವಸ್ಥಾಪಕರಾದಂತಹ ಚಾಸಾ-***2*** ಸತ್ಯನಾರಾಯಣ ರವರು ಅವಶ್ಯಕತೆ ಇದ್ದಲ್ಲಿ ಕಾನೂನು ಸಲಹೆ ಚಾಸಾ-***1*** ರವರು ನೀಡುವಂತೆ ನನಗೆ ತಿಳಿಸಿದರು. ಅವರು ಹೇಳಿದಂತೆ ನಾನು ಶಾಖೆಗೆ ಹೋದಾಗ ಚಾಸಾ-***2*** ರವರು ಹಾಜರಿದ್ದು, ಎಂ ಸಿ ಹಳ್ಳಿ ಶಾಖೆಯ ವ್ಯವಸಾಪಕರಾದ ಚಾಸಾ-***6*** ರವರು, ಬೀರೂರು ಶಾಖಾ ವ್ಯವಸ್ಥಾಪಕರಾದ ಚಾಸಾ-***5*** ರವರು, ಬಾವಿಕೆರೆ ಶಾಖೆಯ ಕ್ಯಾಷಿಯರ್ ಚಾಸಾ-***4*** ರವರು, ಬಾವಿಕೆರೆ ಶಾಖೆಯ ಗೋಲ್ಡ್

ಅಪ್ರೈಸರ್ ಆದ ಚಾಸಾ-*8* ಹಾಗೂ ತರೀಕೆರೆ ಶಾಖೆಯ ಗೋಲ್ಡ್ ಅಪ್ರೈಸರ್ ಆದ ಚಾಸಾ-*9* ರವರು ಹಾಗೂ ಸ್ಥಳೀಯರಾದ ಚಾಸಾ-*10* ರವರು ಹಾಜರಿದ್ದರು. ಆ ಸಮಯಕ್ಕೆ ಆರೋಪಿಯ ಮಗ ಸಾಯಿಕೃಷ್ಣ ರವರು ಹಾಜರಿದ್ದು, ಬ್ಯಾಂಕಿನ ಲಾಕರ್ ಕೀಗಳು ಆರೋಪಿಯ ಹತ್ತಿರ ಇದ್ದು, ಅವುಗಳನ್ನು ಚಾಸಾ-*1* ರವರು ಕಳುಹಿಸಿಕೊಡಿ ಎಂದು ಆರೋಪಿಯ ಮಗನಿಗೆ ತಿಳಿಸಿದ್ದು, ಆರೋಪಿಯನ್ನು ಭೇಟಿ ಮಾಡಲು ಹೋದ ಸಾಯಿಕೃಷ್ಣ ರವರು ಬೀಗಗಳನ್ನು ತೆಗೆದುಕೊಂಡು ಬಂದು ನಮ್ಮ ಸಮಕ್ಷಮದಲ್ಲಿ ಹಾಜರುಪಡಿಸಿದ್ದು, ನಮ್ಮ ಸಮಕ್ಷಮ ಚಾಸಾ-*2* ರವರು ಬ್ಯಾಂಕಿನ ಲಾಕರ್ಗಳನ್ನು ತೆಗೆದರು, ಆ ಸಮಯದಲ್ಲಿ ಆರೋಪಿಯ ಮಗ ಸಾಯಿಕೃಷ್ಣ ಹಾಜರಿದ್ದರು.

ಬ್ಯಾಂಕಿನ ಲಾಕರ್ ಗಳನ್ನು ತೆರೆದಾಗ ಅದರಲ್ಲಿ ಬಂಗಾರದ ಆಭರಣಗಳುಳ್ಳ *59* ಪ್ಲಾಸ್ಟಿಕ್ ಚೀಲಗಳಿದ್ದವು. ಅದೇ ದಿನ ಬಾವಿಕೆರೆ ಶಾಖೆಗೆ ವ್ಯವಸ್ಥಾಪಕರಾಗಿ ನೇಮಕಗೊಂಡ ಚಾಸಾ-*3* ರವರು ಸದರಿ ಪ್ಲಾಃ ಚೀಲಗಳನ್ನು ಬ್ಯಾಂಕಿನ ನಿಯಮಾನುಸಾರ ತಮ್ಮ ವಶಕ್ಕೆ ಪಡೆದರು. ಅವುಗಳನ್ನು ಚಿನ್ನಾಭರಣ ಪರಿಶೀಲಿಸಕರಾದ ಚಾಸಾ-*8, 9* ರವರು ಓರೆ ಹಚ್ಚಿ ನೋಡಿದಾಗ ಅದರಲ್ಲಿ *9* ಆಭರಣಗಳು ನಕಲಿ ಆಭರಣಗಳು ಎಂದು ತಿಳಿಸಿದರು. ಅವುಗಳ ಬಗ್ಗೆ ಚಾಸಾ-*2* ರವರು ವಿಚಾರಿಸಿ ಅವುಗಳ ಮೇಲೆ ಸಾಲ ಪಡೆದ *9* ಜನರನ್ನು ಕರೆಯಿಸಿ ವಿಚಾರಣೆ ಮಾಡಿದಾಗ ಆರೋಪಿಯು ಸದರಿ *9* ಜನರಿಂದ ಬೇರೆ ಉದ್ದೇಶಕ್ಕೆ ಸಹಿ ಪಡೆದು ಹಾಗೂ ಚಾಸಾ-*8* ರವರ ನಕಲಿ ಸಹಿಯನ್ನು ಮಾಡಿ ನಕಲಿ ಆಭರಣಗಳನ್ನು ಬ್ಯಾಂಕಿನಲ್ಲಿಟ್ಟು, ಅವುಗಳ ಮೇಲೆ ಸಾಲದ ಹಣವನ್ನು ತಾನು ಪಡೆದು ದುರುಪಯೋಗಪಡಿಸಿಕೊಂಡಿರುತ್ತಾರೆಂದು ತಿಳಿದು ಬಂತು. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿಯು ಬ್ಯಾಂಕಿಗೆ ಸುಮಾರು *10* ರಿಂದ *11* ಲಕ್ಷ ರೂ. ಹಣದ ನಷ್ಟವನ್ನುಂಟು ಮಾಡಿರುತ್ತಾರೆ. ಸಾಕ್ಷಿಯು ನಿಪಿ-*10* ರಲ್ಲಿ ತೋರಿಸಿರುವ ಆಭರಣಗಳು ತಾನು ನೋಡಿದ ನಕಲಿ ಆಭರಣಗಳೆಂದು ನುಡಿಯುತ್ತಾರೆ.

***ಪಾಟೀ ಸವಾಲು ಃ ಆರೋಪಿತರ ಪರ ಶ್ರೀ  ಎಂ ಕೆ ಟಿ  ವಕೀಲರಿಂದ.***

ಘಟನೆ ನಡೆದ ಮೊದಲು ಬ್ಯಾಂಕಿನಲ್ಲಿರುವ ಬಂಗಾರದ  ಮತ್ತು ಅವುಗಳ ಮೇಲೆ ಪಡೆದಿರುವ ಸಾಲದ ಬಗ್ಗೆ ಪರಿಶೀಲನೆ ಮಾಡಿಲ್ಲ ಎಂದರೆ ಸಾಕ್ಷಿಯು ಅದು ನನ್ನ ಕೆಲಸ  ಅಲ್ಲ ಎಂದು ನುಡಿಯುತ್ತಾರೆ. ಘಟನೆ ನಂತರ ಬ್ಯಾಂಕಿನಲ್ಲಿ ಬಂಗಾರದ ಆಭರಣಗಳನ್ನು ಇಟ್ಟು ಸಾಲವನ್ನು ಪಡೆದವರ  ವಿವರಗಳನ್ನು ನಾನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ನಾನು ದಿಃ***08-06-2013*** ರಂದು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನನ್ನ ಹೇಳಿಕೆಯನ್ನು ಲಕ್ಕವಳ್ಳಿ ಪಿ ಎಸ್ ಐ ಹಾಗೂ ಅವರ ಸಿಬ್ಬಂದಿಯವರು ಪಡೆದಿರುತ್ತಾರೆ. ***9*** ನಕಲಿ ಆಭರಣಗಳ ಮೇಲೆ ಸಾಲ ಪಡೆದವರ ಹೆಸರನ್ನು ಹೇಳಲಾಗುವುದಿಲ್ಲ. ಸದರಿ ***9*** ಜನರನ್ನು  ಕರೆಯಿಸಿ ನಮ್ಮ ಸಮಕ್ಷಮ ಚಾಸಾ-***1*** ರವರು ಹೇಳಿಕೆ ಪಡೆದುಕೊಂಡಿರುತ್ತಾರೆ. ಘಟನೆ ನಂತರದಲ್ಲಿ ಆರೋಪಿಯನ್ನು ನಾನು ಬ್ಯಾಂಕಿನ ಶಾಖೆಯಲ್ಲಿ ನೋಡಿರುವುದಿಲ್ಲ.

ಆರೋಪಿಯ ಹೆಂಡತಿ ಮಕ್ಕಳ ಪರಿಚಯ ನನಗೆ ಇರುವುದಿಲ್ಲ. ಲಾಕರ್ ಕೀಗಳನ್ನು ದಿಃ***08-06-2013*** ರಂದು ಆರೋಪಿಯ ಮಗನಾದ ಚಾಸಾ-***11*** ರವರು  ಬೆಃ***10-30*** ರಿಂದ ***11*** ಗಂಟೆ ಸುಮಾರಿಗೆ ಚಾಸಾ-***2*** ರವರಿಗೆ ನೀಡಿದರು.  ಚಾಸಾ-***11*** ರವರೇ ತಾನು ಆರೋಪಿಯ ಮಗ ಎಂದು ನಮಗೆ ತಿಳಿಸಿರುತ್ತಾನೆ. ಚಾಸಾ-***11*** ರವರು ಬಂದು ತಮ್ಮ ಪರಿಚಯ ಮಾಡಿಕೊಂಡು ಕೀಯನ್ನು ಚಾಸಾ-***2*** ರವರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನಕಲಿ ***9*** ಆಭರಣಗಳ ಆಕಾರ ಮತ್ತು ತೂಕವನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು  ಅದರ ಬಗ್ಗೆ  ಅಪ್ರೈಸರ್  ರವರಿಗೆ ಗೊತ್ತು ಎಂದು ನುಡಿಯುತ್ತಾರೆ. ಬ್ಯಾಂಕಿನಲ್ಲಿ ನಡೆದ ಅಕ್ರಮದ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಚಾಸಾ-***2*** ರವರು ಹೇಳಿದ ಮೇರೆಗೆ  ಗೊತ್ತಾಗಿರುತ್ತದೆಂದು ನುಡಿಯುತ್ತಾರೆ. ನಕಲಿ ಆಭರಣಗಳ ತೂಕ ಆಧರಿಸಿ ಬ್ಯಾಂಕಿಗೆ ಆದ ನಷ್ಟದ ಬಗ್ಗೆ  ಚಾಸಾ-***2*** ರವರು ವರದಿ ತಯಾರಿಸಿ ಮುಖ್ಯ ಶಾಖೆಯ ಚಾಸಾ-***1*** ರವರಿಗೆ ಸಲ್ಲಿಸಿರುತ್ತಾರೆ, ಸದರಿ ವರದಿಯನ್ನು  ನೋಡಿದ ಮೇಲೆ ಬಾಂಕಿಗೆ ***10*** ರಿಂದ ***11*** ಲಕ್ಷ ನಷ್ಟವಾಗಿರುವ ಬಗ್ಗೆ ನನಗೆ ಗೊತ್ತಾಯ್ತು. ಬ್ಯಾಂಕಿನಲ್ಲಿ ಒಟ್ಟು ***59***

ಜನ ಬಂಗಾರದ ಆಭರಣಗಳು ಅಡುವು ಇಟ್ಟು ಸಾಲ ಪಡೆದಿದ್ದರು. *9* ಜನ ನಮ್ಮ ಸಮಕ್ಷಮ ಚಾಸಾ-*2* ರವರಿಗೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಬಂಗಾರವನ್ನು ಪರಿಶೀಲನೆ ಮಾಡಿಲ್ಲ ಹಾಗೂ ವರದಿಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಆ ಸಮಯಕ್ಕೆ ನಾನು ಬ್ಯಾಂಕಿನಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ-*2* ರವರ ಹೇಳಿಕೆ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***ಮರುವಿಚಾರಣೆ:*** ***ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***